ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಬೇಕೆಂದು ಮಾತ್ರ ಯೋಚನೆ ಮಾಡಿದ್ದೇವೆ. ಹಾಸ್ಟೆಲ್ ಪ್ರಾರಂಭ ಮಾಡುತ್ತೇವೆಂದು ವಾಲಂಟರಿ ಆರ್ಗನೈಜೇಷನ್‌ಗಳು ಮುಂದೆ ಬಂದು ಕೆಲಸ ಮಾಡತಕ್ಕದ್ದು ಬಹಳ ಒಳ್ಳೆಯದು.

ESTABLISHMENT OF S.M.P. DISPENSARIES IN NORTH KANARA DISTRICT

893. Smt. RADHA BHAT (Ankola).—

Will the Minister for Health be pleased to state :—

(*a*) whether the Government is considering to establish S. M. P. Dispensaries in Mattighatta, Goli, Doranagiri of Sirsi Taluk and Hallurabalavalli Villages of Ankola Taluk in North Kanara District ;

(*b*) if so, when they will be established ?

Sri H. SIDDAVEERAPPA (Minister for Health).—

(*a*) No.

(*b*) Question does not arise.

ಶ್ರೀಮತಿ ರಾಧಾ ಭಟ್ :—(ಅ) ಭಾಗಕ್ಕೆ ' ಇಲ್ಲ ' ಎಂದು ಹೇಳಿದ್ದೀರಿ. ಯಾವ ಕಾರಣದಿಂದ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಇವು ಹಳೇ ಕಾಲದ ಆಸ್ಪತ್ರೆಗಳು. ಆದಷ್ಟು ಮಟ್ಟಿಗೆ ಉತ್ತಮವಾದ ಆಸ್ಪತ್ರೆಗಳನ್ನು ಮಾಡಬೇಕು, ಹೆಚ್. ಯು. ಟಿ. ಮಾದರಿ ಆಸ್ಪತ್ರೆ ಮಾಡಬೇಕು ಮತ್ತು ಈಗಿರತಕ್ಕ ಆಸ್ಪತ್ರೆಗಳ ಗ್ರೇಡ್ ಸರಿಯಾಗಿಲ್ಲ. ಆದುದರಿಂದ ಈಗ ಏನು ಮಾಮೂಲಿನಿಂದ ನಡೆದುಕೊಂಡು ಬಂದಿದೆ, ಅವಷ್ಟನ್ನು ಇಟ್ಟುಕೊಂಡು ಹೊಸ ಆಸ್ಪತ್ರೆಗಳನ್ನು ತೆಗೆಯುವಾಗ ಹೆಚ್. ಯು. ಟಿ. ಆಸ್ಪತ್ರೆ ಮಾಡಬೇಕೆಂದಿದ್ದೇವೆ.

ಶ್ರೀಮತಿ ರಾಧಾ ಭಟ್ :—ಮಲೆನಾಡು ಪ್ರದೇಶದ ವಿಶಿಷ್ಟವಾದ ಪರಿಸ್ಥಿತಿಯನ್ನು ಗಮನಿಸಿ ಆಸ್ಪತ್ರೆ ತೆಗೆಯಲು ಇರುವ ನಿಯಮಗಳನ್ನು ಸಡಿಲಗೊಳಿಸುವ ವಿಚಾರವನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಅದನ್ನು ವಿಚಾರ ಮಾಡೋಣ. ಮಲೆನಾಡಿನಲ್ಲಿ 15 ಸಾವಿರ ಜನಸಂಖ್ಯೆ ಇರಬೇಕು ಎಂದರೆ ಕೆಲವು ಕಡೆ ಕಷ್ಟವಾಗಬಹುದು. ಆದನ್ನು ರಿಲ್ಯಾಕ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಉತ್ತರ ಕನ್ನಡ ಜಿಲ್ಲೆಯಲ್ಲಿ ಆದರಲ್ಲೂ ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಬೊಂಬಾಯಿ ಸರ್ಕಾರದ ರೂಲ್ಸ್ ಪ್ರಕಾರವಾಗಿ ಎಸ್.ಎಂ.ಪಿ. ಔಷಧಾಲಯಗಳಿದ್ದು ಅವರಿಂದ ಅಲ್ಲಿರತಕ್ಕ ಜನಗಳಿಗೆ ಉಪಯೋಗವಾಗುತ್ತಿತ್ತು. ಈಗ ಇಂಥಾ ಔಷಧಾಲಯಗಳನ್ನು ಕೆಲವನ್ನು ಮುಚ್ಚಿಸಿಬಿಟ್ಟಿದ್ದೀರಿ. ಅದರಿಂದ ಅಲ್ಲಿರತಕ್ಕ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆಯಾದ್ದರಿಂದ ಅವುಗಳ ಉಪಯೋಗವಾಗುವಂತೆ ಅವುಗಳನ್ನು ಮುಂದುವರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಎಸ್. ಎಂ. ಪಿ. ಆಸ್ಪತ್ರೆಗಿಂತ ಉತ್ತಮ ದರ್ಜೆಯ ಆಸ್ಪತ್ರೆ ಗಳನ್ನು ಕೊಡಬೇಕೆಂಬ ಉದ್ದೇಶವಿದೆ ಎಂದು ಆಗಲೇ ಹೇಳಿದೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಂಥ ಕಡೆ ಹೆಲ್ತ್ ಯೂನಿಟ್ ಟೈಪ್ ಆಸ್ಪತ್ರೆ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ. ಈಗಿರತಕ್ಕ ಸಬ್ಸಿಡೈಸ್ ಸ್ಕೀಂ ಆಸ್ಪತ್ರೆಗಳ ಬದಲಾಗಿ ಉತ್ತಮವಾದ ಆಸ್ಪತ್ರೆಗಳನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ.

ಶ್ರೀಮತಿ ರಾಧಾ ಭಟ್ :—ಈ ಹಳ್ಳಿಗಳ ಜನರು ಬಹಳ ಕಷ್ಟಪಡುತ್ತಿದ್ದಾರೆ. ಅವರಿಗೆ ಎಷ್ಟು ತೀವ್ರಗತಿಯಿಂದ ಸೌಲಭ್ಯವನ್ನು ಒದಗಿಸಲಿಕ್ಕೆ ಯೋಚನೆ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ:—ಈಗಾಗಲೇ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಿಂದ ಎಲ್ಲೆಲ್ಲಿ ಆಸ್ಪತ್ರೆ. ಗಳನ್ನು ತೆಗೆಯುವ ಅವಶ್ಯಕತೆ ಇದೆ ಅಂಥದನ್ನು ರಿಪೋರ್ಟ್ ಮಾಡಬೇಕು ಎಂದು ಕೇಳಿದ್ದೇವೆ ಅದು ಬಂದ ಮೇಲೆ ಅವಶ್ಯಕತೆ ಇದ್ದ ಕಡೆ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಎಸ್. ಎಂ. ಪಿ. ಆಸ್ಪತ್ರೆಯನ್ನು ಬದಲಾಯಿಸಿ ಉತ್ತಮ ದರ್ಜೆಯ ಆಸ್ಪತ್ರೆಯನ್ನು ಮಾಡಬೇಕು ಎನ್ನುವ ವಿಷಯವನ್ನು ಹೇಳುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿದ್ದಂಥ ವೈದ್ಯರು ಈ ದಿವಸ ಒಂದು ರೀತಿಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಅವರನ್ನು ಸಹ ಮುಂದುವರಿಸುವುದಕ್ಕೆ ಅವಕಾಶ ಮಾಡಿದರೆ ಈ ತೊಡಕು ನಿವಾರಣೆಯಾಗುತ್ತದೆ. ಉತ್ತಮ ದರ್ಜೆಯ ಆಸ್ಪತ್ರೆ ಮಾಡುವಾಗ ಅರ್ಹತೆ ಇದ್ದರೆ ಅಂಥವರಿಗೆ ಸರ್ಕಾರಿ ಉದ್ಯೋಗಸ್ಥರು ಎಂದು ಮುಂದುವರಿಸುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ:—ಅದನ್ನು ವಿಚಾರ ಮಾಡೋಣ.

ಶ್ರೀಮತಿ ರಾಧಾ ಭಟ್ :—ಸಂತತಿ ನಿಯಂತ್ರಣ ಪ್ರಚಾರವನ್ನು ಮಲೆನಾಡು ಭಾಗದಲ್ಲಿ ಕಡಮೆ ಮಾಡಲು ಸರ್ಕಾರ ಯೋಚಿಸಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ:—ಮಲೆನಾಡು ಮತ್ತು ಮೈದಾನ ಪ್ರದೇಶವೆಂದು ಅದರಲ್ಲಿ ವ್ಯತ್ಯಾಸ ಮಾಡಲು ಕಾರಣವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಮಲೆನಾಡಿನಲ್ಲಿ ಜನಸಂಖ್ಯೆ ಬಹಳ ಕಡಮೆ ಇರುವುದರಿಂದ ಜನನಾಶಕ ಯೋಜನೆ ತರುವುದಾದರೆ ಆಗ ಬರೀ ಕಾಡು ಮಾತ್ರ ಉಳಿಯಬಹುದಾದ ಪರಿಸ್ಥಿತಿ ಬರಬಹುದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ:—ಮಲೆನಾಡಿನಲ್ಲಿ ಅಂಥ ಪರಿಸ್ಥಿತಿ ಇನ್ನೂ ಉದ್ಭವವಾಗಿಲ್ಲ. ಮುಂದಾಗ ನೋಡೋಣ.

Sri K. SIDDAIAH.—Madam Speaker, I may be permitted to put question No. 823 as it is a very important question relating to Scheduled Caste and Scheduled Tribe. Since the Member is absent, I request the chair to put it.

ಅಧ್ಯಕ್ಷರು :—ಸದಸ್ಯರು ಇಲ್ಲದೆ ಇದ್ದರೆ ನಾನೂ ಏನೂ ಮಾಡುವುದಕ್ಕಾಗುವುದಿಲ್ಲ. ಪ್ರಶ್ನೆ ಕಳುಹಿಸಿದ ಮೇಲೆ ನಮ್ಮ ಪ್ರಶ್ನೆಗಳು ಬರುವುದಿಲ್ಲವೆಂದು ಹೇಳುತ್ತಾರೆ. ಪ್ರಶ್ನೆ ಬಂದಾಗ ಪ್ರಶ್ನೆ ಕೇಳುವವರೇ ಇರುವುದಿಲ್ಲ. ಇದು ಐದನೆಯ ಸಲವೋ ಏನೋ ಹೀಗೆ ಆಗುತ್ತ ಇರುವುದು. ಈ ರೀತಿ ಆಗಬಾರದು.